Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in principal@klsvdit.edu.in**

Date: 15-12-2022

**ಪತ್ರಿಕಾ ಪ್ರಕಟಣೆ:**

# ಉದ್ಯಮಿ ನಾರಾಯಣ ತೋಸುರ್ ಉಪನ್ಯಾಸ ಕಾರ್ಯಕ್ರಮ ಯಶಸ್ವಿ

ಹಳಿಯಾಳದ ಹೆಮ್ಮೆಯ ಉದ್ಯಮಿ ಶ್ರೀ. ನಾರಾಯಣ ತೋಸುರ್ ಅವರು ನಗರದ ಕೆ . ಎಲ್. ಎಸ್. ವಿ. ಡಿ. ಐ. ಟಿ. ಯಲ್ಲಿ ಡಿಸೆಂಬರ್ 15 ರಂದು ಉಪನ್ಯಾಸ ನೀಡಿದರು. "ಎಲೆಕ್ಟ್ರಿಕಲ್ ವಾಹನದ ಕಾರ್ಯವೈಖರಿ ವಿವರಿಸುತ್ತ, ವಾಹನದಲ್ಲಿ ಬಳಸಲಾಗುತ್ತಿರುವ ತಂತ್ರಜ್ಞಾನದ ಮಾಹಿತಿ ನೀಡಿದರು. ಎಲೆಕ್ಟ್ರಿಕ್ ವಾಹನದ ದಕ್ಷತೆ ಹೆಚ್ಚಿಸಲು ಇರುವ ಸವಾಲುಗಳನ್ನು ತೆರೆದಿಟ್ಟರು. ವಿದ್ಯಾರ್ಥಿಗಳು ಸ್ಥಳೀಯ ಪ್ರದೇಶದಲ್ಲಿಯೆ ಉದ್ಯಮವನ್ನು ಪ್ರಾರಂಭಿಸಿ ಔದ್ಯಾಮಿಯಾಗಿ ಹೊರಹೋಮ್ಮಿ ದೇಶದ ಆರ್ಥಿಕ ಪ್ರಗತಿಗೆ ಸಹಕರಿಯಾಗಬೇಕು ಎಂದು ಕರೆ ನೀಡಿದರು". ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯರಾದ ಡಾ. ವಿ. ಎ. ಕುಲಕರ್ಣಿ ಅವರು ಗ್ರಾಮೀಣ ಪ್ರದೇಶದಿಂದ ಬಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳುವಂತಹ ಸಾಧನೆ ಮಾಡಿರುವ ಶ್ರೀ. ನಾರಾಯಣ ತೋಸುರ್ ಅವರು ಉಪನ್ಯಾಸ ನೀಡುತ್ತಿರುವುದು ಸಂತಸ ತಂದಿದೆ ಎಂದು ಹೇಳಿದರು. ನಮ್ಮ ವಿದ್ಯಾರ್ಥಿಗಳಿಗೆ ಕೈಗಾರಿಕಾ ಕ್ಷೇತ್ರ ಬಯಸುವ ಕೌಶಲ್ಯಗಳನ್ನು ನೀಡುವಂತೆ ನಾರಾಯಣ ತೋಸುರ್ ಅವರಲ್ಲಿ ಮನವಿ ಮಾಡಿದರು. ಆಡಳಿತ ವಿಭಾಗದ ಮುಖ್ಯಸ್ಥರಾದ ಪ್ರೊ. ಮಂಜುನಾಥ ಡಿ, ಎಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ ವಿಭಾಗದ ಮುಖ್ಯಸ್ಥರಾದ ಪ್ರೊ. ಎ. ವಿ. ಕೊಳಕಿ ಅವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಪ್ರೊ. ವರಪ್ರಸಾದ ಜಿ, ಪ್ರೊ. ಸುಬ್ರಮಣ್ಯ ಹೆಚ್, ಪ್ರೊ. ರವೀಂದ್ರ ಎಂ ಕಾರ್ಯಕ್ರಮ ಸಂಯೋಜಿಸಿದ್ದರು. ಕುಮಾರ. ಯಾಸಿನ್ ಪಾಠಣ್ ಸ್ವಾಗತಿಸಿ ನಿರೂಪಿಸಿದರು. ಕುಮಾರಿ. ಸ್ವಾತಿ ಜೋಶಿ ವಂದಿಸಿದರು. ವಿತಾವಿ ಬೆಳಗಾವಿಯ ರಜತ ವರ್ಷ ಮಹೋತ್ಸವದ ಪ್ರಯುಕ್ತ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ 100ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪ್ರಾಂಶುಪಾಲರು

**Principal**
**KLS Vishwanathrao Deshpande**
**Institute of Technology, Haliyal**


PRAXIEN
Electric Vehicle Trends &
KLS
VDIT